## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ. PW-2

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿನಾಂಕ 30.08.2025

ಪಾಟೀ ಸವಾಲುಃ 2, 3, 7 ಮತ್ತು 9 ನೇ ಪ್ರತಿವಾದಿ ಪರ ವಕೀಲರಿಂದಃ

ನನಗೆ ದಾವಾ ಆಸ್ತಿ ಸರ್ವೆ ನಂಬರ್ ಗೊತ್ತಿರುವುದಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣವೂ ಸಹಾ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಸುತ್ತಾ ಮುತ್ತಾ ನನಗೆ ಸೇರಿದ ಆಸ್ತಿ ಇರುವುದಿಲ್ಲ. 1 ನೇ ವಾದಿಯನ್ನು ಅರ್ಚಕರಕಾಗಿ ಸರ್ಕಾರದಿಂದ ನೇಮಕ ಮಾಡಿರುತ್ತಾರೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. 1 ನೇ ವಾದಿಯು ಸರ್ಕಾರದಿಂದ ದಸ್ತುಕನ್ನು ಖಾಸಗಿಯಾಗಿ ಪಡೆದಿರುತ್ತಾರೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. 1 ನೇ ವಾದಿ ಹಾಗೂ ಇತರರು ಏನು ಕೆಲಸ ಮಾಡುತ್ತಾರೆ ಎಂದು ನಿಮಗೆ ಗೊತ್ತಿದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

1 ನೇ ವಾದಿ ಎಲ್ಲಿ ವಾಸವಾಗಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ತಾಳಶಾಸನ ಗ್ರಾಮ ಇರುತ್ತದೆ ಎಂದು ನುಡಿಯುತ್ತಾರೆ. 1 ನೇ ವಾದಿ ಮನೆಯಲ್ಲಿ ಸಹಾ ಪೂಜೆ ಹಾಗೂ ಪುನಸ್ಕಾರ ಮಾಡುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಾನು ಹಾಗೂ ವಾದಿಯರು ಒಂದೇ ಕೋಮಿಗೆ ಸೇರಿದ ಜನ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.